# ಉಪ ತಹಶೀಲ್ದಾರರು ನಾಡ ಕಾರ್ಯಾಲಯ ತೆಕ್ಕಲಕೋಟೆ ಇವರ ನ್ಯಾಯಲಯ

| ವಾದಿಗಳು | ಪ್ರತಿವಾದಿಗಳು |
|---|---|
| ಎನ್.ಪಂಪಯ್ಯ ತಂದೆ | ಸುರೇಂದ್ರಶಾಸ್ತ್ರೀ ತಂದೆ |
| ದಿ॥ಎನ್.ಈರಪ್ಪ | ಲಕ್ಷಿನರಸಿಂಹಶಾಸ್ತ್ರೀ |
| ತೆಕ್ಕಲಕೋಟೆ | ಬಳ್ಳಾರಿ |

| ಕ್ರ.ಸ | ತಾಲೂಕು | ಹೋಬಳಿ | ಗ್ರಾಮ | ಸ.ನಂ | ವಿಸ್ತೀರ್ಣ | ತರೆಹೆ |
|---|---|---|---|---|---|---|
| 01 | ಸಿರುಗುಪ್ಪ | ತೆಕ್ಕಲಕೋಟೆ | ತೆಕ್ಕಲಕೋಟೆ | 642 ಎ<br>642 ಸಿ | 2.78<br>5.35 | ಖುಷ್ಕಿ |

**ಪೀಠಿಕೆ:-**

ಸಿರುಗುಪ್ಪ ತಾಲೂಕು ತೆಕ್ಕಲಕೋಟೆ ಹೋಬಳಿ ತೆಕ್ಕಲಕೋಟೆ ಗ್ರಾಮದ ಮೇಲ್ಕಾಣಿಸಿದ ಜಮೀನಿನ ಹಕ್ಕು ಬದಲಾವಣೆಗೆ ಸಂಬಂದಿಸಿದಂತೆ ದಿನಾಂಕ 30-04-2016 ರಂದು ಮಾಡಿಕೊಂಡ ಒಪ್ಪಿಗೆ ಪತ್ರದ ಪ್ರಕಾರ ಹಕ್ಕು ಬದಲಾವಣೆಗೆ ತಾಲೂಕು ಕಛೇರಿ ಸಿರುಗುಪ್ಪದಲ್ಲಿ ದಿನಾಂಕ 21-05-2016 ರಂದು ಸ್ವಿಕೃತಗೊಂಡ ಅರ್ಜಿಯನ್ನು ಹಕ್ಕು ಬದಲಾವಣೆ ಪ್ರಕ್ರಿಯೆ ಜರಿಗಿಸಲು ದಿನಾಂಕ 13-06-2016 ರಂದು ನಮೂನೆ-21 ನೋಟೀಸ್ ತಯಾರಿಸಿ ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರಿಗೆ ಕಳುಹಿಸಿಕೊಡಲಾಗಿ ಸದ್ರಿ ನಮೂನೆ-21 ನೋಟೀಸನ್ನು ಗ್ರಾಮದಲ್ಲಿ ಪ್ರಚುರಪಡಿಸಿರುವ ಸಮಯದಲ್ಲಿ ನಿಗದಿತ ಅವದಿಯೊಳಗಾಗಿ ಆಸಕ್ತಿಉಳ್ಳವರಿಂದ ತಕರಾರು ಅರ್ಜಿ ಸ್ವಿಕೃತಗೊಂಡಿರುವುದರಿಂದ ಇದೊಂದು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಈ ಕಾರ್ಯಾಲಯಕ್ಕೆ ಕಡತ ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದ ವಿವಾದಾಸ್ಪದ ವಹಿಯಲ್ಲಿ ನಮೂದಿಸಿಕೊಂಡು ಕರ್ನಾಟಕ ಭೂ ಕಂದಾಯ ಕಾಯ್ದೆ ನಿಯಮಗಳು 1966 ನಿಯಮ 43 ಮತ್ತು 87 ರಂತೆ ವಿಚಾರಣೆ ದಿನಾಂಕ ನಿಗದಿಪಡಿಸಿ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸ್ ನೀಡಿ ವಿಚಾರಣೆ ನಡೆಸಿ ವಿಚಾರಣೆಯನ್ನು ಮುಕ್ತಾಯಗೊಳಿಸಲಾಯಿತು.

ವಿವಾದಾಸ್ಪದ ಪ್ರಕರಣದ ವಿಚಾರಣೆ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಗಳು ಹಾಜರಿದ್ದು ಪ್ರತಿವಾದಿಗಳು ವಿಚಾರಣೆ ಸಮಯದಲ್ಲಿ ಸದ್ರಿ ಜಮೀನಿನ ಹಕ್ಕು ಬದಲಾವಣೆಗೆ ಸಂಬಂದಿಸಿದಂತೆ ನಮ್ಮ ತಂದೆಯು ನನಗೆ ಒಪ್ಪಿಗೆ ಪತ್ರದ ಮೂಲಕ ಜಮೀನನ್ನು ನೀಡಿರುತ್ತಾರೆ ಕಾರಣ ಹಕ್ಕುಬದಲಾವಣೆ ಮಾಡಲು

ಕೋರಿರುತ್ತಾರೆ. ಪ್ರತಿವಾದಿಗಳು ಸದ್ರಿ ಜಮೀನನ್ನು ಪ್ರತಿವಾದಿಗಳು ತಂದೆಯು ಲಕ್ಷ್ಮಿನರಸಿಂಹಶಾಸ್ತ್ರೀ ತಂದೆ ವೆಂಕಟಶಾಸ್ತ್ರೀ ಇವರು ಡಾಕುಮೆಂಟ ನಬಂರ್ 2699/10-11 ದಿ.17-08-2010ರ ಪ್ರಕಾರ ನನಗೆ ವಿಕ್ರಯಿಸಿರುತ್ತಾರೆ. ಸದ್ರಿ ಜಮೀನು ನನ್ನ ಸ್ವಾದಿನಾನುಭವದಲ್ಲಿ ಇದ್ದು ನಾನೇ ಸಾಗುವಳಿ ಮಾಡುತ್ತಿದ್ದೇನೆ. ಕಾರಣ ವಾದಿಗಳು ದುರುದ್ದೇಶದಿಂದ ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ನೋಂದಾಯಿತ ದಸ್ತಾವೇಜು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಸದ್ರಿ ವಿವಾದಾಸ್ಪದ ಪ್ರಕರಣದಲ್ಲಿನ ದಾಖಲೆಗಳನ್ನು ಪರಿಶೀಲಿಸಲಾಗಿ ಹಾಗೂ ವಾದ ಮತ್ತು ಪ್ರತಿವಾದಗಳನ್ನು ಆಲಿಸಲಾಗಿ ವಾದಿಗಳು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ವಾದಿಗಳು ರೂ 20/- ರೂಪಾಯಿ ಛಾಪಾ ಕಾಗದದ ಮೇಲೆ ಒಪ್ಪಿಗೆ ಪತ್ರ ಸಲ್ಲಿಸಿರುತ್ತಾರೆ. ಅದರೆ ಸದ್ರಿ ಒಪ್ಪಿಗೆ ಪತ್ರವು ನೋಂದಾವಣೆ ಆಗಿರುವುದಿಲ್ಲ ವಾದಿಗಳು ರೂ 20/- ರೂಪಾಯಿ ಛಾಪಾ ಕಾಗದದಲ್ಲಿ ವಂಶವೃಕ್ಷವನ್ನು ಅಫಿಡವಿಟ್ ಸಲ್ಲಿಸಿರುತ್ತಾರೆ. ಕಂದಾಯ ಇಲಾಖೆಯಿಂದ ಪಡೆದಿರುವುದಿಲ್ಲ ಕಾರಣ ವಾದಿಗಳು ಸರಿಯಾದ ದಾಖಲೆಗಳನ್ನು ಸಲ್ಲಿಸದೆ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಸದ್ರಿ ಜಮೀನುಗಳು ಡಾಕುಮೆಂಟ್ ನಂಬರ 2699/2010-11 ದಿನಾಂಕ 17-08-2010 ರ ಪ್ರಕಾರ ಪ್ರತಿವಾದಿಗಳ ಹೆಸರಿಗೆ ವಿಕ್ರಯ ನೋಂದಾವಣೆ ಆಗಿರುತ್ತದೆ. ಕಾರಣ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 128 ಮತ್ತು 129 ಪ್ರಕಾರ ಕ್ರಮಕೈಗೊಳ್ಳುವ ಅವಶ್ಯಕತೆ ಇರುವುದರಿಂದ ಈ ಕೆಳಗಿನಂತೆ.

**ಸಂ।ಕಂ।ಹ.ಬ। ವಿವಾದ।89।15-16** **ದಿನಾಂಕ:26।07।2016**

## ಆದೇಶ

ಪೀಠಿಕೆಯಲ್ಲಿ ವಿವರಿಸುವ ಹಿನ್ನೆಲೆಯಲ್ಲಿ ಹಾಗೂ ದಾಖಲೆಗಳ ಆಧಾರದನ್ವಯ ಸಿರುಗುಪ್ಪ ತಾಲೂಕು ತೆಕ್ಕಲಕೋಟೆ ಗ್ರಾಮದ ಸ.ನಂ:-642ಎ ವಿ:-2.78,ಸ.ನಂ:-642ಸಿ ವಿ:-5.35 ಎಕರೆ ಜಮೀನುಗಳನ್ನು ಡಾಕುಮೆಂಟ್ ನಂಬರ 2699/2010-11 ದಿನಾಂಕ 17-08-2010 ರ ಪ್ರಕಾರ ಮೂಲ ಪಟ್ಟಾದಾರರ ಹೆಸರನ್ನು ಕಡಿಮೆ ಮಾಡಿ ಎನ್.ಪಂಪಯ್ಯ ತಂದೆ ದಿ॥ಎನ್.ಈರಪ್ಪ ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಸದ್ರಿ ಆದೇಶವನ್ನು ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ಓದಿ ದಿನಾಂಕ 26-07-16 ರಂದು ಬಹಿರಂಗವಾಗಿ ಘೋಷಿಸಲಾಯಿತು.

ಪ್ರತಿಯನ್ನು:-

1)ವಾದಿ ಮತ್ತು ಪ್ರತಿವಾದಿಗಳಿಗೆ
2)ಭೂಮಿ ಕೇಂದ್ರ ಸಿರುಗುಪ್ಪ

ಉಪ ತಹಶೀಲ್ದಾರ

ಉಪತಹಶೀಲ್ದಾರರು
ನಾಡ ಕಾರ್ಯಾಲಯ
ತೆಕ್ಕಲಕೋಟೆ